ಸಾಕ್ಷಿಯನ್ನು ದಿಃ **11.10.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್.ಎಲ್ ವಕೀಲ**ರಿಂದ**

ಈ ದಾವಾದಲ್ಲಿ ಕಾಣಿಸಿರುವ ಎಲ್ಲಾ ದಾವಾ ಐಟಂ 1 ರಿಂದ 18 ರ ಸ್ವತ್ತುಗಳು ವಾದಿ ಮತ್ತು ಪ್ರತಿವಾಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನಮ್ಮ ತಂದೆ ಅವರ ಜೀವವಿತಾವಧಿಯಲ್ಲಿ ಯಾವುದೆ ಮರಣ ಶಾಸನ ಬರದಿಟ್ಟಿರುವುದಿಲ್ಲ, ಬರೆಯುವ ಉದ್ದೇಶ ಕೂಡ ಅವರಿಗೆ ಇರಲಿಲ್ಲ. ದಾವಾ 1 ನೇ ಐಟಂ ಒಟ್ಟು ವಿಸ್ತೀರ್ಣ 23 ಎಕರೆ 14 ಗುಂಟೆ ಪೈಕಿ 12 ಎಕರೆ 11 ಗುಂಟೆ ಮುಳುಗಡೆ ಆಗಿ ಉಳಿಕೆ 11 ಎಕರೆ, 3 ಗುಂಟೆ ಜಮೀನು ಇದೆ ಎಂದರೆ ಸರಿ. ಅದೆ ರೀತಿ ದಾವಾ 2 ನೇ ಐಟಂ ಸ್ವತ್ತು ಒಟ್ಟು ವಿಸ್ತೀರ್ಣ 11 ಎಕರೆ 28 ಗುಂಟೆ ಪೈಕಿ 4 ಎಕರೆ 19 ಗುಂಟೆ ಮುಳುಗಡೆ ಆಗಿ ಉಳಿಕೆ 7 ಎಕರೆ 9 ಗುಂಟೆ ಇದೆ ಎಂದರೆ ಸರಿ. ದಾವಾ 3 ನೇ ಐಟಂ ಸ್ವತ್ತು 7 ಎಕರೆ 26 ಗುಂಟೆ ಪೈಕಿ 2 ಎಕರೆ 20 ಗುಂಟೆ ಮುಳಗಡೆ ಆಗಿ ಉಳಿಕೆ 5 ಎಕರೆ 6 ಗುಂಟೆ ಇದೆ ಎಂದರೆ ಸರಿ. ದಾವಾ 1 ರಿಂದ 3 ನೇ ಐಟಂ ಸ್ವತ್ತುಗಳು 1963 ರಲ್ಲಿ ಮುಳುಗಡೆ ಆಗಿದೆ ಎಂದರೆ ಸಾಕ್ಷಿ ನಮ್ಮ ತಾತ ಅದನ್ನು 1965 ರಲಿ ಖರೀದಿ ಮಾಡಿದ್ದು, 1968 ರಲ್ಲಿ ಪರಿಹಾರ ಘೋಷಣೆ ಆಗಿತ್ತು ಎನ್ನುತ್ತಾರೆ. ಅದೆ ರೀತಿ ದಾವಾ ಐಟಂ 4 ಸ್ವತ್ತು ನಮ್ಮ ತಂದೆಗೆ ದರಖಾಸ್ತು ಮೂಲಕ ಬಂದಿತ್ತು ಎಂದರೆ ಸರಿ. ಸರ್ವೆ ನಂ. ದಾವಾ ಐಟಂ 5 ರ ಸರ್ವೆ ನಂ. 60/ ಬಿ 78 ವಿಸ್ತೀರ್ಣ 36 ಗುಂಟೆ ಜಮಿನು ನಮ್ಮ ತಂದೆಗೆ ಸಾಗುವಳಿ ಮೂಲಕ ಬಂದಿತ್ತು ಎಂದರೆ ಸರಿ.

ದಾವಾ 4 ನೇ ಐಟಂ ಸ್ವತ್ತಿನಲ್ಲಿ ಒಟ್ಟು ವಿಸ್ತೀರ್ಣ 2 ಎಕರೆಯಲ್ಲಿ ನಮ್ಮ ಸೋದರ ಮಾವ ದಾಸೇಗೌಡ ಮತ್ತು ನನ್ನ ತಾಯಿಯ ತಂಗಿ ಅಂದರೆ ನಮ್ಮ ಚಿಕ್ಕಮ್ಮ ಲಕ್ಷಮ್ಮ ನವರು ಅನುಭವದಲ್ಲಿ ಇದ್ದಾರೆ ಆದರೆ ದಾಖಲಾತಿಗಳೆಲ್ಲಾ ನಮ್ಮ ತಂದೆ ಕೆಂಪೇಗೌಡರ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿದೆ ಎಂದರೆ ಸರಿ. ಈ ದಾವಾ 4 ನೇ ಐಟಂ ಸ್ವತ್ತಿನ ದಕ್ಷಿಣಕ್ಕೆ ದಾವಾ ಐಟಂ ನಂ. 1 ರ 6 ಎಕರೆ 39

ಗುಂಟೆ ಸ್ವತ್ತು ಇದೆ ಎಂದರೆ ಸರಿ. ಈ ದಾವಾ ಐಟಂ ನಂ. 1 ರ ಸ್ವತ್ತಿಗೆ ನಾವೆಲ್ಲಾ ಓಡಾಡಬೇಕೆಂದರೆ ದಾವಾ 4 ನೇ ಐಟಂ ಸ್ವತ್ತಿನ ಮೂಲಕವೆ ಓಡಾಡಬೇಕು ಎಂದರೆ ಸರಿ.

ಸರ್ವೆ ನಂ. 71 ಮತ್ತು 73 ಅಸ್ವಾಳು ಗ್ರಾಮದಲ್ಲಿ 2 ಎಕರೆ 16 ಗುಂಟೆ ಜಮೀನು ನಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದು ಅದರ ಖಾತೆಯನ್ನು ನಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ನಮ್ಮ ತಂಗಿಯಾದ ವಾದಿ ಹೆಸರಿಗೆ ಖಾತೆ ಕೂರಿಸಿದ್ದರು ಎಂದರೆ ಸರಿ. ಸದರಿ 2 ಎಕರೆ 16 ಗುಂಟೆ ಸ್ವತ್ತನ್ನು ನಾನು ಮತ್ತು 2 ನೇ ಪ್ರತಿವಾದಿ ಸೇರಿ ನಮ್ಮ ಕುಟುಂಬದ ಅವಶ್ಯಕತೆಗಾಗಿ ವಾದಿಯಿಂದ ಮಾರಾಟ ಮಾಡಿಸಿದ್ದೇವೆ ಎಂದರೆ ಸರಿ. ಈ ರೀತಿ ಮಾರಾಟ ಮಾಡಿ ಬಂದಂತಹ ಪ್ರತಿಫಲದ ಹಣವನ್ನು ನಮ್ಮ ಒಟ್ಟು ಕುಟುಂಬದ ದರ್ದಿಗಾಗಿ ನಾನು ಮತ್ತು 2 ನೇ ಪ್ರತಿವಾದಿ ವಾದಿಯಿಂದ ಪಡೆದುಕೊಂಡಿದ್ದೇವೆ ಎಂದರೆ ಸರಿ ಎಂದು ನುಡಿದು ನಮ್ಮ ತಂದೆ ಕಾಯಿಲೆ ಬಿದ್ದಾಗ ಅದನ್ನು ಖರ್ಚು ಮಾಡಿದ್ದಾರೆ ಎನ್ನುತ್ತಾರೆ. ನಮ್ಮ ತಂದೆ ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿ. ಸದರಿ ಕಾಯಿಲೆಯನ್ನು ವಾಸಿ ಮಾಡಿಸಲು ಈಗ ಮೇಲೆ ಹೇಳಿದಂತಹ 2 ಎಕರೆ 16 ಗುದಟೆ ಸ್ವತ್ತಿನ ಮಾರಾಟ ಮಾಡಿ ಬಂದಂತಹ ಹಣವನ್ನು ವಾದಿ ಮತ್ತು ಪ್ರತಿವಾದಿಯ 1 ಮತ್ತು 2 ನಾವೆಲ್ಲಾ ಸೇರಿ ಖರ್ಚು ಮಾಡಿದ್ದೇವೆ ಎಂದರೆ ಸರಿ. ವಾದಿ ಮೋಸ ಮಾಡುವ ಉದ್ದೇಶದಿಂದ ದಾವಾ 1 ರಿಂದ 18 ನೇ ಸ್ವತ್ತುಗಳ ಪೈಕಿ ಕೆಲವು ಐಟಂ ಸ್ವತ್ತುಗಳನ್ನು ಪ್ರತಿವಾದಿ 1 ಮತ್ತು 2 ರವರಾದ ನಾವುಗಳು 3 ನೇ ಪ್ರತಿವಾದಿ ಹೆಸರಿಗೆ ಆದಂತೆ ಒಂದು ವಿಲ್ ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ನಾನು ಸೃಷ್ಟಿ ಮಾಡಿಲ್ಲ ಪ್ರತಿವಾದಿ 2 ಮತ್ತು 3 ರವರು ಸೇರಿ ಸೃಷ್ಟಿ ಮಾಡಿದ್ದಾರೆ.

ದಾವಾ 2 ನೇ ಐಟಂ ಸ್ವತ್ತಿನ ಪೈಕಿ ಮುಳುಗಡೆ ಆಗಿ ಉಳಿದ ಸ್ವತ್ತು ನಮ್ಮ ಸೋದರ ಮಾವ ಟಿ ದಾಸೇಗೌಡರಿಂದ ನಮ್ಮ ತಂದೆ ಹೆಸರಿಗೆ ಸಿ.ಎಸ್ 260/86 ರ ಆದೇಶದಂತೆ ವರ್ಗಾವಣೆಯಾಗಿದೆ ಎಂದರೆ ಸರಿ, ಅದು ಸಿ.ಎಸ್ ಅಲ್ಲ ಓ.ಎಸ್ ಎನ್ನುತ್ತಾರೆ. ನಮ್ಮ ತಂದೆ ಸಂಪಾದನೆ ಮಾಡಿದ ಯಾವುದೆ ಸ್ವತ್ತುಗಳ ಇರುವುದಿಲ್ಲ, ಇರುವ ಎಲ್ಲಾ ಸ್ವತ್ತುಗಳು ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ, ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿಸಿದ ಸ್ವತ್ತುಗಳು ಎನ್ನುತ್ತಾರೆ. ನಮ್ಮ ತಂದೆ ಖರೀದಿಸಿದ್ದಾರೆ ಎಂದು

ಹೇಳಿರುವ ಸ್ವತ್ತುಗಳನ್ನು ದಾವಾ 1 ರಿಂದ 3 ನೇ ಐಟಂ ಸ್ವತ್ತುಗಳ ಪೈಕಿ ಕೆಲವೊಂದು ವಿಸ್ತೀರ್ಣ ಮುಳುಗಡೆ ಆಗಿ ಬಂದಂತಹ ಪರಿಹಾರದ ಹಣದಿಂದ ಕೇಲವು ಐಟಂ ಸ್ವತ್ತುಗಳನ್ನು ಖರೀದಿಸಲಾಗಿದೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತುಗಳಲ್ಲಿ ನನ್ನ ತಂಗಿಯಾದ ವಾದಿಗೆ 1/3 ನೇ ಸಮ ಭಾಗಾಂಶದ ಹಕ್ಕಿದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.